ಸಂಜೆ 4 ರವರೆಗೆ ಮಾತ್ರ ಪ್ರವೇಶ ಅವಕಾಶ ನೀಡಲಾಗಿದೆ.

ಕಣ್ಣು ಹಾಯಿಸಿದಷ್ಟು ದೂರವೂ ಹಸಿರು, ತಂಪಾದ ಗಾಳಿ, ನಗರದ ಜನಜಂಗುಳಿ, ಗದ್ದಲವಿಲ್ಲದೆ ಹಾಯ್ ಎನಿಸುವ ವಾತಾವರಣ. ಹಾಗಾಗಿಯೇ ಚಾಮರಾಜನಗರ, ಮೈಸೂರು, ಮಂಡ್ಯ ಜಿಲ್ಲೆಗಳಿಂದ ಭಾರೀ ಸಂಖ್ಯೆಯ ಪ್ರವಾಸಿಗರು ಈ ಬೆಟ್ಟ ನೋಡಲು ಬರುತ್ತಾರೆ. ಜತೆಗೆ ಬಂಡೀಪುರಕ್ಕೆ ಬಂದವರು ದೊಡ್ಡ ಸಂಖ್ಯೆಯಲ್ಲಿ ಗೋಪಾಲಸ್ವಾಮಿ ಬೆಟ್ಟಕ್ಕೆ ಭೇಟಿ ಕೊಡುವುದೂ ಇದೆ. ಬೇಸಿಗೆಯ ಅಥವಾ ವಾರಂತ್ಯದ ರಜೆ ಕಳೆಯಲು ಇದು ಹೇಳಿ ಮಾಡಿಸಿದ ತಾಣ.

ಪ್ರವಾಸಿಗರಿಗೆ ಬೆಟ್ಟದಲ್ಲಿ ಉಳಿದುಕೊಳ್ಳಲು ಯಾವುದೇ ವ್ಯವಸ್ಥೆ ಇರುವುದಿಲ್ಲ. ಊಟ ತಿಂಡಿಗಾಗಿ ಹೋಟೆಲ್ ಮತ್ತು ಅಂಗಡಿಗಳು ಕೂಡಾ ಈ ಬೆಟ್ಟದ ಮೇಲೆ ಇಲ್ಲ. ಹಾಗಾಗಿ ಬರುವಾಗಲೇ ಊಟ, ತಿಂಡಿ ಕಟ್ಟಿಕೊಂಡು ಬರುವವರು ಹೆಚ್ಚು. ಆದರೆ ಪ್ಲಾಸ್ಟಿಕ್ ಕೈ ಚೀಲಗಳನ್ನು ಬೆಟ್ಟಕ್ಕೆ ತೆಗೆದುಕೊಂಡು ಹೋಗುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ.

ಬೆಟ್ಟದ ಮೇಲೆ ಬರುವವರು ಸುಸ್ಥಿತಿಯಲ್ಲಿರುವ ಕಾರು, ವಾಹನಗಳಲ್ಲಿ ಬರುವುದು ಒಳ್ಳೆಯದು. ತುಂಬಾ ಹಳೆಯ ಡೀಸೆಲ್ ಕಾರುಗಳು ಬೆಟ್ಟ ಹತ್ತಲು ಒದ್ದಾಡುವುದಿದೆ.

ಗುಂಡ್ಲುಪೇಟೆ ಮತ್ತು ನಂಜನಗೂಡಿನಲ್ಲಿ ಕೈಗೆಟಕುವ ದರದಲ್ಲಿ ಊಟ ಮತ್ತು ವಸತಿ ಸೌಲಭ್ಯವಿದೆ. ಉನ್ನತ ದರ್ಜೆಯ ಸಾಕಷ್ಟು ರೆಸಾರ್ಟ್‌ಗಳು ಹತ್ತಿರದಲ್ಲಿಯೇ ಇದೆ. ಬೆಟ್ಟದ ತುದಿಯವರೆಗೂ ವಾಹನಗಳು ಸಂಚರಿಸುವ ರಸ್ತೆಯಿದ್ದು, ಬೆಂಗಳೂರಿನಿಂದ ಹೊರಡುವ ಪ್ರವಾಸಿಗರು ಬೆಳಿಗ್ಗೆ ಹೊರಟು ರಾತ್ರಿಯ ವೇಳೆಗೆ ಹಿಂದಿರುಗಬಹುದು. ಬಸ್‌ನಲ್ಲಿ ಬೆಂಗಳೂರಿನಿಂದ ಸುಮಾರು ಐದೂವರೆ ಗಂಟೆಯ ಪ್ರಯಾಣ. ರೈಲಿನಲ್ಲಿ ಪ್ರಯಾಣಿಸುವವರು ಮೈಸೂರು ಅಥವಾ ನಂಜನಗೂಡಿನವರೆಗೆ ರೈಲಿನಲ್ಲಿ ಪ್ರಯಾಣಿಸಿ ನಂತರ ಖಾಸಗಿ ವಾಹನ ಅಥವಾ ಸಾರಿಗೆ ಸಂಸ್ಥೆಯ ಬಸ್‌ನಲ್ಲಿ ತೆರಳಬಹುದು.

ಸಮಯ ಹೊಂದಿಸಿಕೊಂಡಲ್ಲಿ ಬೆಟ್ಟವನ್ನು ನೋಡಿದ ನಂತರ ಪಕ್ಕದಲ್ಲಿಯೇ ಇರುವ ಹುಲಿ ಸಂರಕ್ಷಿತ ತಾಣ ಬಂಡೀಪುರವನ್ನು ವೀಕ್ಷಿಸಬಹುದು. ಬಂಡೀಪುರದಲ್ಲಿ ಊಟ ಮತ್ತು ಅರಣ್ಯ ಇಲಾಖೆಯ ವಸತಿ ಸೌಲಭ್ಯ ಇದೆ. ಇಲ್ಲಿ ಆನ್‌ಲೈನ್ ಬುಕ್ಕಿಂಗ್ ಸೌಲಭ್ಯವಿದ್ದು, ಇದಕ್ಕಾಗಿ ಜಾಲತಾಣ **www.bandipurtigerreserve.in** ವೀಕ್ಷಿಸಬಹುದು.

## ತಲುಪುವುದು ಹೇಗೆ?

ಬೆಂಗಳೂರಿನಿಂದ ಮೈಸೂರು, ನಂಜನಗೂಡು, ಗುಂಡ್ಲುಪೇಟೆ ಮಾರ್ಗವಾಗಿ ಊಟಿಗೆ ತೆರಳುವ ದಾರಿಯಲ್ಲಿದೆ ಗೋಪಾಲಸ್ವಾಮಿ ಬೆಟ್ಟ. ಬೆಂಗಳೂರಿನಿಂದ ಸುಮಾರು 220 ಕಿ.ಮೀ. ದೂರ. ಮೈಸೂರಿನಿಂದ 80 ಕಿ.ಮೀ.; ನಂಜನಗೂಡಿ-ನಿಂದ 55 ಕಿ.ಮೀ. ಹಾಗೂ ಗುಂಡ್ಲುಪೇಟೆಯಿಂದ 20 ಕಿ.ಮೀ. ದೂರದಲ್ಲಿದೆ.

ಮೈಸೂರಿನಿಂದ ಕರ್ನಾಟಕ ಸಾರಿಗೆ ಸಂಸ್ಥೆಯ ಬಸ್ ಸಂಪರ್ಕ ಇದ್ದು, ಮೈಸೂರನ್ನು ಬಸ್ಸು ಪ್ರತಿದಿನ ಬೆಳಗ್ಗೆ 9 ಗಂಟೆಗೆ ಬಿಡುತ್ತದೆ. ಹಾಗೆಯೇ ಗುಂಡ್ಲುಪೇಟೆಯಿಂದ ಬೆಳಿಗ್ಗೆ 11ಕ್ಕೆ ಮತ್ತು ಮಧ್ಯಾಹ್ನ 3 ಗಂಟೆಗೆ ಸಾರಿಗೆ ಬಸ್ ಹೊರಡುತ್ತದೆ. ಹೆಚ್ಚಿನ ವಿವರಗಳಿಗಾಗಿ ಈ ದೂರವಾಣಿ ನಂಬರ್‌ಗಳನ್ನು ಸಂಪರ್ಕಿಸ-ಬಹುದು: ಗುಂಡ್ಲುಪೇಟೆ ಬಸ್ ಡಿಪೋ 7760990314. ಮೈಸೂರು ಬಸ್ ಡಿಪೋ 0821-2520853 / 7760990813.

ಹತ್ತಿರದ ರೈಲು ನಿಲ್ದಾಣ: ನಂಜನಗೂಡು ಪಟ್ಟಣ.



